ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು) —

ಅ) ಕಾಲೇಜು ಶಿಕ್ಷಣ ಇಲಾಖೆಯಲ್ಲಿರುವ ಕಾಲೇಜುಗಳು ಹಾಗೂ ಕಿರಿಯ ಕಾಲೇಜುಗಳಲ್ಲಿ ೬೯ ದೈಹಿಕ ಶಿಕ್ಷಕ ಹುದ್ದೆಗಳು ಖಾಲಿ ಇವೆ.

ಆ) ೨೨೮ (ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯ)

ಇ) ಆದಷ್ಟು ಶೀಘ್ರವಾಗಿ

ಮಂಡಲ್ ಪಂಚಾಯತ್ ಜಿಲ್ಲಾ ಪರಿಷತ್ ಚುನಾವಣೆ

೪೯೮. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಕ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಂಡಲ್ ಪಂಚಾಯಿತ್‌ಗಳಿಗೆ ಹಾಗೂ ಜಿಲ್ಲಾ ಪರಿಷತ್ತುಗಳಿಗೆ ಯಾವಾಗ ಚುನಾವಣೆ ನಡೆಸಲಾಗುವುದು ?

ಆ) ವಿಳಂಬಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)—

ಅ) ಕಾಯ್ದೆಯಲ್ಲಿ ಅಡಕವಾಗಿರುವ ಕಲವೊಂಗಳ ರೀತ್ಯಾ ಚುನಾವಣೆಗಳ ಪೂರ್ವಭಾವಿ ಸಿದ್ಧತೆಗಳು ಭರದಿಂದ ಸಾಗಿವೆ. ಪೂರ್ವಭಾವಿ ಸಿದ್ಧತೆಗಳು ಮುಂಗಿದ ಮೇಲೆ ಮಂತ್ರಿಮಂಡಲ ಚುನಾವಣೆಯ ದಿನಾಂಕ ಗೊತ್ತುಪಡಿಸುವುದು.

ಆ) 'ಅ'ನಲ್ಲಿ ಉತ್ತರಿಸಲಾಗಿದೆ.

ರಾಜ್ಯಪತ್ರ (ಗೆಜೆಟ್) ತಡವಾಗಿ ತಲುಪುವ ಬಗ್ಗೆ

೫೧೯. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

ಅ) ಕರ್ನಾಟಕ ರಾಜ್ಯ ಪತ್ರ (ಗೆಜೆಟ್) ಪ್ರಕಟಣೆ ದಿನಾಂಕ ಹಾಗೂ ಕಡೇ ದಿನ ಅವಧಿ ಮುಗಿದು ೨-೩ ತಿಂಗಳ ನಂತರ ತಲುಪುವುದು. ಇದರಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ ಆ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ

ಆ) ಈ ರೀತಿಯ ತಡವಾಗದಂತೆ ಈಗಾಗಲೇ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಹಾಗೂ ಡಿಸೆಂಬರ್ ೮೫ ರಿಂದ ಮೊದಲ್ಗೊಂಡು ಈ ತಹಲ್‌ವರೆಗೆ ಎಲ್ಲಾ ರಾಜ್ಯ ಪತ್ರಗಳು ಸಕಾಲದಲ್ಲಿ ಪ್ರಕಟವಾಗಿವೆ.

ಶಿಕಾರಿಪುರದ ಸರಕಾರಿ ಕಾಲೇಜು ಕಟ್ಟಡದ ಬಗ್ಗೆ

೨೭೧. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕಳೆದ ೧೦ ವರ್ಷಗಳಿಂದ ಶಿಕಾರಿಪುರ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಶಾಲೆ ನಡೆಸಲು ಕೊಠಡಿಗಳಿಲ್ಲದೆ ಕಳೆದ ೨ ವರ್ಷಗಳಿಂದಲೂ ಕೊಠಡಿ ಕಟ್ಟಿಸಲು ಲೋಕೋಪಯೋಗಿ ಇಲಾಖೆಗೆ ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸಲು ತಿಳಿಸಲಾಗಿದೆ ಮತ್ತು ಕೊಠಡಿಗಳನ್ನು ಕಟ್ಟಲಾಗುತ್ತೆ ಎಂದು ಸರ್ಕಾರದವರು ಆಶ್ವಾಸನೆ ನೀಡಿರುವುದು ನಿಜವೆ ?

ಆ) ಈ ವರ್ಷವಾದರೂ ಅಲ್ಲಿಯ ವಿದ್ಯಾರ್ಥಿಗಳ ತೊಂದರೆಯನ್ನು ಪರಿಹರಿಸಿ ಕಟ್ಟಡದ ಕೆಲಸ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಹೌದು

ಆ) ಆರ್ಥಿಕ ಅಡಚಣೆಯಿಂದ ಹೊಸ ಕಟ್ಟಡಗಳ ನಿರ್ಮಾಣ ಕಾರ್ಯ ಸಧ್ಯಕ್ಕೆ ಆರಂಭಿಸಂತಿಲ್ಲ.

ಅಂತರ್ ಜಿಲ್ಲಾ ಮೇವು ಹುಲ್ಲು ಸಾಗಾಣಿಕೆ ಬಗ್ಗೆ

೧೧೭೦. ಶ್ರೀ ವಿನಯಕುಂಪಾರ್ ಸೊರಕೆ (ಪುತ್ತೂರು).—ಮಾನ್ಯ ಆಹಾರ ಮಂತ್ರಿ ನಾಗರಿಕ ಸರಬರಾಜು ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸಂವರೆ ?

ಅ) ಮೇವು ಸಾಗಾಣಿಕೆಯಂ ಮಟ್ಟಿಗೆ ಅಂತರ್ ಜಿಲ್ಲಾ ನಿರ್ಭಂಧವಿದೆಯೇ?

ಆ) ಹೊರಗಡೆಯ ಮೇವನ್ನೇ ಅವಲಂಬಿಸಿರುವ ಪುತ್ತೂರು ತಾಲ್ಲೂಕಿನ ಮೇವು ಸಾಗಾಣಿಕೆಯ ವಾಹನಗಳಿಗೆ ಅಧಿಕಾರಿಗಳು ಕಿರುಕುಳ ಕೊಡುತ್ತಿರಲು ಕಾರಣವೇನು ?

ಇ) ಪುತ್ತೂರು ತಾಲ್ಲೂಕಿಗೆ ಮೇವು ಸಾಗಾಣಿಕೆಯಂ ಮಟ್ಟಿಗೆ ಸೂಕ್ತವಾದ ನಿರ್ದೇಶನ ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಲಾಗುವುದೇ ?

ಶ್ರೀ ಸಿದ್ದರಾಮಯ್ಯ.(ಪಶುಸಂಗೋಪನಾ ಹಾಗು ಪಶು ವೈದ್ಯ ಸೇವೆಗಳ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಕಿರುಕುಳ ಕೊಡುತ್ತಿರುವ ಪ್ರಸಂಗಗಳು ಗಮನಕ್ಕೆ ಬಂದಿರುವುದಿಲ್ಲ.

ಇ) ನೀಡಿದೆ.

ಆಂಗ್ಲ ಪ್ರವೀಣ ದರ್ಜೆ ಶೀಘ್ರಲಿಪಿಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳ ಬಗ್ಗೆ

೧೫೧೩. ಶ್ರೀ ಆರ್. ವೆಂಕಟರಾಮಯ್ಯ (ಮಂಳಬಾಗಿಲು).—ಮಾನ್ಯ ಶಿಕ್ಷಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ ?

ಅ) ೧೯೮೫ರ ನವೆಂಬರ್ ಪರೀಕ್ಷೆಯಲ್ಲಿ ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ ಹಾಗೂ ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆಗೆ ಕುಳಿತ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಆ) ಅವರಲ್ಲಿ ತೇರ್ಗಡೆಯಾದವರ ಸಂಖ್ಯೆ ಎಷ್ಟು ?

ಇ) ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆಯ ಸಿನೇ ಪ್ರಶ್ನೆ ಪತ್ರಿಕೆಯಲ್ಲಿ ಹೆಚ್ಚು ಮುಂದಿನಪಾಸಾಗಿರುವುದು ನಿಜವೇ ?

ಈ) ತೇರ್ಗಡೆಯಾದವರ ಸಂಖ್ಯೆಯನ್ನು ಆದಷ್ಟು ಕಡಿಮೆ ಮಾಡಲೋಸುಗವಾಗಿಯೇ ಸಿನೇ ಪ್ರಶ್ನೆ ಪತ್ರಿಕೆಯಲ್ಲಿ ಕೆಲವಷ್ಟು ಅಂಕಗಳನ್ನು ಕಡಿಮೆ ಮಾಡಲಾಗಿದೆ ಎಂಬ ಆಂಶ ನಿಜವೇ ?

ಉ) ಹಾಗಿಲ್ಲದಿದ್ದಲ್ಲಿ ಸಿನೇ ಪ್ರಶ್ನೆ ಪತ್ರಿಕೆಯ ಮೌಲ್ಯಮಾಪನಕ್ಕೆ ಗೊತ್ತುಪಡಿಸಿರುವ ಮಾನದಂಡವೇನು ?

ಊ) ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ ಹಾಗೂ ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆಗೆ ಹೋಲಿಸಿದಲ್ಲಿ ಕಡಿಮೆ ಸಂಖ್ಯೆಯ ಅಭ್ಯರ್ಥಿಗಳು ಆಂಗ್ಲ ಶೀಘ್ರಲಿಪಿಯಲ್ಲಿ ತೇರ್ಗಡೆಯಾಗಿರಲು ಕಾರಣವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ೧) ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ – ೧೨೩

೨) ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ – ೧೯೦

ಆ) ೧) ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ – ೫

೨) ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ – ೦೦